

ನೋಡಬೇಕು’ ಎಂದೆ. ‘ನಾನು ನಿಮಗೆ ಇಲ್ಲಿ ಕೆಲಸ ಮಾಡುವ ನಿಮ್ಮ ದೇಶದವರನ್ನೇ ಕರೆದು ಲೈಬ್ರರಿ ತೋರಿಸಲು ಹೇಳುತ್ತೇನೆ’ ಎಂದಳು.

ಹಾಗೆ ನನಗೆ ಲೈಬ್ರರಿ ತೋರಿಸಲು ಬಂದವಳ ಹೆಸರು ಪ್ರಭಾ; ಗುಜರಾತ್‌ನವಳು. 30 ವರ್ಷದ ಹಿಂದೆ ಅಮೆರಿಕಕ್ಕೆ ಬಂದು ನೆಲೆಸಿದವಳು. ಆ ಸ್ವಲ್ಪ ಸಮಯದಲ್ಲಿ ಅವಳು ನನ್ನ ಅಕ್ಕನೋ ಎಂಬಷ್ಟು ಆತ್ಮೀಯಳಾದಳು. ಸ್ವಂತ ಮನೆ ತೋರಿಸುವಂತೆ ಅಕ್ಕರೆಯಿಂದ ತೋರಿಸಿದಳು. ಅನ್ಯರಿಗೆ ಪ್ರವೇಶ ಇರದ ಲೈಬ್ರರಿಯ ಕೆಲಸಗಾರರು ಊಟ, ವಿಶ್ರಾಂತಿ ತೆಗೆದುಕೊಳ್ಳುವ ಖಾಸಾ ಕೋಣೆಯನ್ನೂ ತೋರಿಸಿ ಅಲ್ಲಿ ಇದ್ದವರು ನನ್ನನ್ನು ಪ್ರಶ್ನಾರ್ಥಕವಾಗಿ ನೋಡಿದಾಗ ‘ಇವಳು ನನ್ನ ಕುಟುಂಬದವಳು’ ಎಂದು ಪರಿಚಯ ಮಾಡಿಸಿದ್ದಳು! ನಾನು ಅಲ್ಲಿಂದ ಹೊರಡುವಾಗ ಅಲ್ಲಿನ ನೆನಪಿಗಾಗಿ ಸಾಂಟಾಕ್ಲಾರ ಸೆಂಟ್ರಲ್ ಪಾರ್ಕ್ ಲೈಬ್ರರಿ ಎಂದು ಬರೆದಿದ್ದ ಹಸಿರು ಬಣ್ಣದ ಕಪ್ ಒಂದನ್ನು ನನಗೆ ಉಡುಗೊರೆಯಾಗಿ ಕೊಟ್ಟಳು. ಪ್ರತಿಯಾಗಿ ನಾನು ನನ್ನ ಮನೆಯಲ್ಲಿ ಮಾಡಿದ ಯಾರಿಗೋ ಕೊಡಲೆಂದು ಬ್ಯಾಗಲ್ಲಿ ಇಟ್ಟಿದ್ದ ಹಲಸಿನ ಹಪ್ಪಳದ ಒಂದು ಕಟ್ಟು ಕೊಟ್ಟೆ. ತುಂಬ ಖುಶಿಯಿಂದ ಪಡೆದುಕೊಂಡಳು. ಇದಾದ ಮೇಲೆ ನಾನು 2–3 ಬಾರಿ ಆ ಲೈಬ್ರರಿಗೆ ಭೇಟಿ ಕೊಟ್ಟೆ.

ಅಮೆರಿಕ ಪುಸ್ತಕಪ್ರೇಮಿಗಳ ದೇಶ. ಇಲ್ಲಿನ ಎಲ್ಲ ಲೈಬ್ರರಿಗಳೂ ಶಿಕ್ಷಣ ಆಧಾರಿತವಾಗಿದ್ದು ಮಕ್ಕಳಸ್ನೇಹಿ ಆಗಿರುತ್ತದೆ. ಮಗುವಿರುವಾಗಲೇ ಪುಸ್ತಕ ಓದುವ ಅಭಿರುಚಿ ಬೆಳೆಸಲಾಗುತ್ತದೆ. ಓದಿನ ಕಾರಣದಿಂದ ಇಲ್ಲಿಯ ಮಕ್ಕಳು ಪ್ರಶ್ನೆ ಮಾಡುವ ಮತ್ತು ವಿವೇಚಿಸುವ ಸಾಮರ್ಥ್ಯ ಹೊಂದಿದ್ದಾರೆ. ಅಂಬೆಗಾಲಿಡುವ ಮಗುವಿನಿಂದ ಹಿಡಿದು ವ್ಹೀಲ್‌ಚೇರ್‌ನಲ್ಲಿ ಸಾಗುವ ವೃದ್ಧರವರೆಗೆ ಎಲ್ಲರೂ ಲೈಬ್ರರಿಗೆ ಹೋಗುವವರೇ! ಎರಡು ವರ್ಷದ ಒಳಗಿನ ಮಕ್ಕಳನ್ನು ಕೂರಿಸಿ ಆಟಿಕೆಗಳ ಮೂಲಕ, ಚಿತ್ರ ಪುಸ್ತಕ, ಕತೆ, ಹಾಡು, ಕುಣಿತದ ಮೂಲಕ ಅವರನ್ನು ಲೈಬ್ರರಿಯತ್ತ ಆಕರ್ಷಿಸುವಂತೆ ಲೈಬ್ರರಿಯನ್‌ಗಳು ಮಾಡುತ್ತಾರೆ.

ಪುಟ್ಟ ಮಕ್ಕಳಿಗಾಗಿ ಕಿಡ್ಸ್ ರೂಮ್ ಎಂಬ ಪ್ರತ್ಯೇಕ ವಿಭಾಗ ಇದೆ. ಮಗುವಿನ ಅಕ್ಷರ ಕಲಿಕೆ ಸುಲಭವಾಗಲಿ ಎಂದು ಆ ರೂಮಿನ ನೆಲಕ್ಕೆ ಇಂಗ್ಲಿಷ್ ವರ್ಣಮಾಲೆಯಿರುವ ಆಕರ್ಷಕ ನೆಲಹಾಸನ್ನು ಹಾಸಿರುತ್ತಾರೆ. ಮಕ್ಕಳು ಇಂತಿಷ್ಟು ಎಂದು ಪುಸ್ತಕ ಓದಿದರೆ ಅವರಿಗೆ ತಿಂಗಳಲ್ಲಿ ಒಂದು ದಿನ ಐಸ್‌ಕ್ರೀಮ್ ಕೊಡುತ್ತಾರೆ! ಪ್ರತಿದಿನ ಮಧ್ಯಾಹ್ನ 3 ಗಂಟೆಯ ನಂತರ ಲೈಬ್ರರಿ ಮಕ್ಕಳಿಂದ ತುಂಬಿರುತ್ತದೆ. ಭಾರತದಲ್ಲಿ ಮಕ್ಕಳು ಶಾಲೆಗೆ ಹೋಗುವಾಗ ಮಣ ಭಾರದ ಪುಸ್ತಕ ಹೊತ್ತರೆ ಇಲ್ಲಿ ಮಕ್ಕಳು ಖುಷಿಯಿಂದ ಕೇಜಿಗಟ್ಟಲೆ ಪುಸ್ತಕಗಳನ್ನು ಲೈಬ್ರರಿಯಿಂದ ಮನೆಗೆ ಹೊರುತ್ತಾರೆ. ಮಕ್ಕಳ ಪುಸ್ತಕ ಎಷ್ಟು ಆಕರ್ಷಕವಾಗಿತ್ತೆಂದರೆ, ನನಗೂ ಅಮೆರಿಕದಲ್ಲಿ ಮಗುವಾಗಿ ಹುಟ್ಟಬೇಕೆಂಬ ಆಸೆ ಮೊಳೆಯಿತು.

ಮಕ್ಕಳನ್ನು ಸೆಳೆಯಲು ಲೈಬ್ರರಿಯಲ್ಲಿ ಅಕ್ವೇರಿಯಂ, ಬೊಂಬೆಗಳೂ ಇರುತ್ತವೆ. ಹಲೋವಿನ್, ಕ್ರಿಸ್‌ಮಸ್ ಇತ್ಯಾದಿ ಹಬ್ಬಗಳನ್ನು ಮಕ್ಕಳ ಸಮ್ಮುಖದಲ್ಲಿ ಆಚರಿಸುತ್ತಾರೆ. ಮಕ್ಕಳಲ್ಲಿ ಪರಿಸರ ಪ್ರೀತಿ ಹುಟ್ಟಿಸಲು ಲೈಬ್ರರಿಯ ಹೊರಗೆ ಮಕ್ಕಳ ಗಾರ್ಡನ್ ಎಂದು ಇದೆ. ಇಲ್ಲಿ ಮಕ್ಕಳು ಗಿಡ ನೆಡಬಹುದು. ಸಸಿಗಳಿಗೆ ನೀರು ಹಾಕಬಹುದು. ವಿದ್ಯಾರ್ಥಿಗಳಿಗೆ ಕಂಬೈನ್ಡ್ ಸ್ಟಡಿ ಮಾಡಲು ಪ್ರತ್ಯೇಕ ಹಾಲ್‌ಗಳ ವ್ಯವಸ್ಥೆ ಇದೆ. ಅಲ್ಲಿ ಹಿರಿಯರು ಹೋಗಿ ಕುಳಿತು ಓದುವಂತಿಲ್ಲ. ಆಯಾಯ ತರಗತಿಯ ವಿದ್ಯಾರ್ಥಿಗಳು ಒಟ್ಟು ಸೇರಿ ಒಂದೊಂದು ಗ್ರೂಪ್ ಮಾಡಿ ಪಾಠಕ್ಕೆ ಸಂಬಂಧಿಸಿದ ಮಾಹಿತಿ ವಿನಿಮಯ ಮಾಡುತ್ತಾರೆ. ಟೀನ್ ಏಜ್ ಮಕ್ಕಳಿಗೂ ಪ್ರತ್ಯೇಕ ವಿಭಾಗವಿರುತ್ತದೆ. ಕೆಲವೊಮ್ಮೆ ಅಧ್ಯಾಪಕರು ಮಕ್ಕಳನ್ನು ಲೈಬ್ರರಿಗೆ ಕರೆದುಕೊಂಡು ಬಂದು ಕೂರಿಸಿ ಪಾಠ ಮಾಡುವುದೂ ಇದೆ. ಅಮ್ಮಂದಿರು ಇಲ್ಲಿಯೇ ಮಕ್ಕಳಿಗೆ ಹೋಂ ವರ್ಕ್ ಹೇಳಿಕೊಡುತ್ತಾರೆ.

## ಹಿರಿಯರಿಗೂ ಅನುಕೂಲ

ಕಾರು ಚಲಾಯಿಸಲು, ನಡೆದಾಡಲು ಅಶಕ್ತರಾದ ಹಿರಿಯ ನಾಗರಿಕರಿಗೆ ಲೈಬ್ರರಿಗೆ ಹೋಗಬೇಕೆಂದಿದ್ದರೆ ಉಚಿತವಾಗಿ ಅವರ ಮನೆಬಾಗಿಲಿಗೆ ವಾಹನ ಬರುತ್ತದೆ. ಲೈಬ್ರರಿಯಲ್ಲಿ ಅಂತವರಿಗೆಂದೇ ಗಾಲಿಕುರ್ಚಿಗಳನ್ನು ಇಟ್ಟಿರುತ್ತಾರೆ. ಅವರು ಅದರಲ್ಲಿ ಕುಳಿತು ತಮಗೆ ಬೇಕಾದ ಪುಸ್ತಕ ಆಯ್ಕೆ ಮಾಡಿ ಪುನಃ ಅದೇ